
# ಹಾಸ್ಯವೆನಲು ಹಗುರವೇ



**ಭುವನೇಶ್ವರಿ ಹೆಗಡೆ**

ಕಲೆ: ವೆಂಕಟ್ರಮಣ ಭಟ್



ಸದಾ ಅಳುವ ನಾಯಕಿಯರ ಕಣ್ಣೀರಿನಿಂದ ಬಕೆಟ್ ತುಂಬಿಸುವ ಸೀರಿಯಲ್‌ಗಳು ಬೇಕೋ ನಕ್ಕು ನಲಿಸುತ್ತೇವೆಂಬ ಕಾಮಿಡಿ ಷೋಗಳು ಬೇಕೋ? ಎಂಬೊಂದು ಆಯ್ಕೆಯನ್ನು ನಿಮ್ಮ ಮುಂದಿಟ್ಟರೆ ನೀವು ಯಾವುದನ್ನು ಆರಿಸಿಕೊಳ್ಳುತ್ತೀರೆಂಬುದು ನಿಮ್ಮ ನಿಮ್ಮ ಧಾರ್ಷ್ಟ್ಯಕ್ಕೆ ಬಿಟ್ಟದ್ದು. ಅತ್ತ ದರಿ ಇತ್ತ ಪುಲಿ. ಎರಡನ್ನೂ ಎದುರಿಸಲು ಗುಂಡಿಗೆ ಗಟ್ಟಿ ಇರಬೇಕು. ಸುಂದರ ನಾಯಕಿಯರನ್ನು ದಡ್ಡರ ಹಾಗೆಯೂ ಚಿತ್ರಿಸುವುದು ಯಾಕೋ. ಯಾವ ಸೂತ್ರದ ಪ್ರಕಾರ ಅವರು ಸದಾ ಸಹಾನುಭೂತಿ ಗಳಿಸಬೇಕೆಂಬ ಗೋಳುಕರೆ ಕಥೆಯನ್ನು ಬರೆದುಕೊಡುವಂತೆ ಸಂಭಾಷಣಾಕಾರರನ್ನು ಕೇಳಲಾಗುತ್ತದೆಯೋ ಎಂಬುದು ಕುತೂಹಲದ ಸಂಗತಿ.

ನಮ್ಮ ಮನೆಯಲ್ಲಿ ಟೀವಿ ಧಾರಾವಾಹಿಗಳನ್ನು ನೋಡುವವರ ಸಂಖ್ಯೆ ತುಂಬಾ ಕಡಿಮೆ. ದೂರದರ್ಶನದ ಹಿತವಾದ ವಾರ್ತಾ ಪ್ರಸಾರ, ಕೃಷಿ ಹಾಗೂ ಗ್ರಾಮೀಣ ಅಭಿವೃದ್ಧಿಯ ಕುರಿತಾದ ಕಾರ್ಯಕ್ರಮಗಳು, ಶಾಂತ ಸ್ವರದಲ್ಲಿ ಪರಿಚಯಿಸಲ್ಪಡುವ ಸಾಧಕರು, ಪ್ರತಿಭಾವಂತರು, ಹಳೆಯ ಹಾಡುಗಳು ಇತ್ಯಾದಿಗಳನ್ನು ನೋಡುತ್ತೇವೆ. ಈ ಕಾರ್ಯಕ್ರಮಗಳ ಬಗೆಗಾಗಲಿ, ರಿಮೋಟಿಗಾಗಲಿ ನಮ್ಮ ಕುಟುಂಬದ ಸದಸ್ಯರು ಪೈಪೋಟಿ ನಡೆಸಿ ಜಗಳವಾಡಿಕೊಳ್ಳುವುದಿಲ್ಲ. ಆದರೆ, ನಗರಗಳಲ್ಲಿ ಮಕ್ಕಳಿಗೆ ರಜಾ ಘೋಷಣೆ ಆಯ್ತೆಂದರೆ ನಮ್ಮ ಹಳ್ಳಿಯ ಮನೆಗೆ ಹತ್ತಿರದ ಬಂಧುಗಳ ಪ್ರವೇಶವಾಗುತ್ತದೆ. ಕೊರೋನಾ ಸಂದರ್ಭದಲ್ಲಿಯೂ ವೈರಸ್ಸಿಗೆ ಹೆದರಿ ತಾವಿರುವ ನಗರವನ್ನು ಬಿಟ್ಟು ಬಂದ ಬಂಧುಗಳಿಗೆ ಇಲ್ಲ ಎನ್ನಲಾಗದೆ ಆಶ್ರಯ ನೀಡಿದ್ದೆವು. ಹಳ್ಳಿಯ ನಮ್ಮ ತೋಟದ ಮನೆಯಲ್ಲಿ ಎಂದೋ ಬಾಧಿಸಬಹುದಾದ ಮಂಗನ ಕಾಯಿಲೆಯೊಂದನ್ನು ಬಿಟ್ಟರೆ ಯಾವುದೇ ವೈರಸ್ಸಿನ ಭಯವಿಲ್ಲದೆ ನಿರಾಳವಾಗಿ ಉಸಿರಾಡಿಸಿಕೊಂಡಿದ್ದೇವೆ. ನಮ್ಮ ಕೊಟ್ಟಿಗೆ ಸೆಗಣಿ ಗೊಬ್ಬರಕುಳಿ ಎಲ್ಲೆಲ್ಲೂ ವೈರಸ್‌ಗಳ ಸದ್ದಿಲ್ಲ. ಗಂಡಸರು ಬಾಯ್ತುಂಬಾ ತುಂಬಿಕೊಂಡಿರುವ ಎಲೆಯಡಿಕೆ ರಸವನ್ನು ಉಗುಳಲು ಮಾತ್ರ ಮನೆಯಿಂದ ದೂರದಲ್ಲಿ ವ್ಯವಸ್ಥೆ ಮಾಡಿದ್ದೇವೆ. ಆ ಮಟ್ಟಿಗೆ ನಮ್ಮ ಇಡೀ ಹಳ್ಳಿಯೇ ವೈರಸ್ ಮುಕ್ತ. ವೈರಸ್‌ಭಯ ಮುಕ್ತವೂ ಹೌದು.

ಆದರೆ, ನಮ್ಮೀ ಬಂಧುಗಳ ಕುಟುಂಬ ಬರುವಾಗ ನಮ್ಮ ಮನೆಯಲ್ಲಿ ಇದುವರೆಗೆ ಇಲ್ಲದ ವೈರಾಣುವೊಂದನ್ನು ತಂದು ಒಳಗೆ ಬಿಟ್ಟರು.